ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1159/2023 .

ಪ್ರಾ.ಸಾ. : 1

ಚಾ.ಸಾ. : 1

| | | |
|---|---|---|
| ಹೆಸರು | : | ಸುಮಿತ್ರ |
| ಗಂಡನ ಹೆಸರು | : | ಗಿರೀಶ್ |
| ವಯಸ್ಸು | : | 35 ವರ್ಷ |
| ಉದ್ಯೋಗ | : | ತೋಟದ ಕೆಲಸ |
| ವಿಳಾಸ | : | ಬೆಸಗೂರು |

... ......................................................................................................... ...

ದಿನಾಂಕ 07 ನೇ ಜೂನ್ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ- ಮಾನ್ಯ ಸ ಸ ಅ ರವರಿಂದ :-

ಆರೋಪಿ ನನ್ನ ಗಂಡ. ಚಾಸಾ 2 ನನ್ನ ತಾಯಿ. ಆರೋಪಿ ನನ್ನ ಜೊತೆ ತಾಯಿ ಮನೆಯಲ್ಲಿ ವಾಸ ಮಾಡುತ್ತಿದೆವು. ದಿಃ18.06.2017 ರಂದು ಮಧ್ಯಾಹ್ನ 3ಃ30 ರಿಂದ 4 ಗಂಟೆ ಸುಮಾರಿಗೆ ನಾನು ಕೆಲಸ ಮುಗಿಸಿಕೊಂಡು ಮನೆಗೆ ಬಂದೆ ಆ ಸಮಯದಲ್ಲಿ ಆರೋಪಿ ತುಂಬಾ ಕುಡಿದು ಬಂದು ನಮ್ಮ ತಾಯಿಯ ಮನೆಯ ಗೇಟ್ ಬಳಿ ಬಂದನು. ಆ ಸಮಯದಲ್ಲಿ ಆರೋಪಿಯು ಅವ್ಯಾಚ್ಯ ಶಬ್ದಗಳಿಂದ ಬೈಯುತ್ತಾ ಮೊದಲು ನನ್ನ ತಲೆಗೆ ಕತ್ತಿಯಿಂದ ಹಲ್ಲೆ ಮಾಡಿದನು. ಆಗ ನಾನು ತಪ್ಪಿಸಿಕೊಂಡೆ, ನನ್ನ ತಾಯಿ ತಡೆಯಲು ಬಂದಾಗ ಅವರಿಗೂ ಸಹ ಅದೆ ಕತ್ತಿಯಿಂದ ಎಡಗೈಗೆ ಹಲ್ಲೆ ಮಾಡಿದನು. ನನ್ನ ತಾಯಿಯ ಎಡಗೈ ಪೆಟ್ಟಾಗಿ ಶಸ್ತ್ರ ಚಿಕಿತ್ಸೆ ಮಾಡಿ ರಾಡ್ ಅನ್ನು ಅಳವಡಿಸಿರುತ್ತಾರೆ. ಆರೋಪಿಯು ನಂತರ ಕತ್ತಿ ಬಿಸಾಕಿ ಸ್ಥಳದಿಂದ ಓಡಿ ಹೋದನು ಆ ಸಮಯದಲ್ಲಿ ಯಾರು ನಮ್ಮನ್ನು ಬಿಡಿಸಲು ಬಂದಿಲ್ಲ. ಈಗ ನೋಡುತ್ತಿರುವ ಕತ್ತಿಯಿಂದಲೆ ಆರೋಪಿ ನನಗೆ ಹಲ್ಲೆ ಮಾಡಿರುತ್ತಾನೆ. ಸದರಿ ಕತ್ತಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಎಂ ಒ 1 ಎಂದು ಈಗಗಲೇ ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿ ವಿಚಾರಣೆ ಆದಾಗ ಗುರುತಿಸಲಾಗಿರುತ್ತದೆ. ಈ ವಿಚಾರವಾಗಿ ನಾನು ಆರೋಪಿಯ ವಿರುದ್ಧ ದೂರು ಕೊಟ್ಟಿರುತ್ತೇನೆ. ಸಾಕ್ಷಿಯು ದೂರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 2, ಸಾಕ್ಷಿ ಸಹಿ ನಿಪಿ 2 ಎ ಎಂದು ಈಗಾಗಲೇ ಕಲಂ 299 ಸಿ.ಆರ್.ಪಿ.ಸಿ ಅಡಿಯಲ್ಲಿ ಸಾಕ್ಷಿ ವಿಚಾರಣೆ ಆದಾಗ ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲು</u> :- ಆರೋಪಿ ಪರ ವಕೀಲರವರಿಂದ :-

ನಾನು ಮದುವೆ ನಂತರ ನಾನು ನನ್ನ ಗಂಡನ ಮನೆಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನಮ್ಮ ತಾಯಿ ನನ್ನ ಗಂಡನ ಜೊತೆ ಕೇವಲವಾಗಿ ಮಾತನಾಡುತ್ತಿದ್ದೆವು, ಯಾವುದೇ ಗೌರವ ಕೊಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ನನ್ನ ಗಂಡನ ನಡುವೆ 2 ದಿನದ ಹಿಂದೆ ಜಗಳ ಆಗಿತ್ತು, ನಾನು ತೋಟಕ್ಕೆ ಕೆಲಸಕ್ಕೆ ಹೋಗುತ್ತಿದ್ದೆ. ಗಲಾಟೆ ನಮ್ಮ ಮನೆಯಲ್ಲಿ ಮ. 3.30 ರ ಸಮಯದಲ್ಲಿ ಆಯಿತು ಆಗ ನಮ್ಮ ತಾಯಿ ಸಹ ಇದ್ದರು. ಆರೋಪಿ ನಮ್ಮ ತಾಯಿಯ ಕೈ ಕಡೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಾಯಿಯ ಎಡ ಗೈ ಕಡೆದರು. ಮೊದಲು ಗೋಣಿಕೊಪ್ಪ ಆಸ್ಪತ್ರೆಗೆ ನಂತರ ಮಡಿಕೇರಿ ಆಸ್ಪತ್ರೆಗೆ ಹೋದೆವು. ನಾವು ಚಿಕಿತ್ಸೆ ಪಡೆದ ಬಗ್ಗೆ ದಾಖಲಾತಿ ಹಾಜರುಪಸಿಡಿಲ್ಲ ಎಂದರೆ ಸರಿ. ಕತ್ತಿ ನ್ಯಾಯಾಲಯದ ಮುಂದೆ ಇಲ್ಲ ಎಂದರೆ ಸರಿಯಲ್ಲ. ನಾನು ಅದೇ ದಿನ ಪೊ. ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ನಾನೇ ಬರೆದಿರುತ್ತೇನೆ. ನನ್ನ ಗಂಡ ನಮ್ಮ ಮನೆ ಬಿಟ್ಟು ಮುರ್ನಾಡುವಿಗೆ ಹೋದ ಕಾರಣಕ್ಕೆ ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಘಟನೆ ಆಯಿತು ಎಂದು ಹೇಳಿದ ದಿನ ನನ್ನ ಗಂಡ ಮುರ್ನಾಡುವಿನಲ್ಲಿ ಇದ್ದರು ನಮ್ಮ ಮನೆಯಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಕತ್ತಿಗೆ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಗಲಾಟೆ ಮುಗಿದ ನಂತರ ಅಕ್ಕಪಕ್ಕದವರು ಅಲ್ಲಿಗೆ ಬಂದರು.

ಪೊಲೀಸರು ಮರುದಿನ ಬಂದರು. ಮಹಜರ್‌ಗೆ ಠಾಣೆಯಲ್ಲಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮನೆಯ ಬಳಿ ಮಹಜರ್‌ಗೆ ಸಹಿ ಮಾಡಿದ್ದೇನೆ. ಪೊಲೀಸರು ಮಹಜರ್ ಅನ್ನು ಓದಿ ಹೇಳಲಿಲ್ಲ. ನಾನು ಮಹಜರ್ ಅನ್ನು ಓದಲಿಲ್ಲ. ಮಹಜರ್‌ಗೆ ನಮ್ಮ ತಂದೆ ಸಹ ಸಹಿ ಮಾಡಿದರು. ನಮ್ಮ ತಂದೆಗೆ ಗಲಾಟೆ ವಿಚಾರ ನಾವು ತಿಳಿಸಿದ ನಂತರ ತಿಳಿಯಿತು ಎಂದರೆ ಸರಿ. ನನಗೂ ಸಲ ತಲೆಗೆ ಏಟಾಗಿತ್ತು. ಮನೆಯ ಮುಂದೆ ಗಲಾಟೆ ಆಯಿತು. ನಾನು ನಮ್ಮ ತಾಯಿ ಸೇರಿ ಸುಳ್ಳು ದೂರು ನೀಡಿದ್ದೇವೆ ಎಂದರೆ ಸರಿಯಲ್ಲ. ನಮ್ಮ ತಾಯಿಗೆ ನನ್ನ ಗಂಡನನ್ನು ಕಂಡೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ಮತ್ತು ನನ್ನ ಗಂಡ ಪ್ರತ್ಯೇಕವಾಗಿ ಇದ್ದೇವೆ. ನಾನು ಮತ್ತು ನನ್ನ ಗಂಡ ಒಟ್ಟಾಗಿ ಇರಲು ನನ್ನ ತಾಯಿ ಬಿಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ, ಈ ಪ್ರಕರಣಕ್ಕೂ, ಮು. ಮಾ ಗೂ, ಸಾಕ್ಷಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸಶೀಶ್ ಗಲಾಟೆ ನಂತರ ಅಲ್ಲಿಗೆ ಬಂದಿರುತ್ತಾರೆ.

**<u>ಮರುವಿಚಾರಣೆ</u> :- - ಇಲ್ಲ -**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

Sd/xxx-

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.

(ಸಾಕ್ಷಿಯವರ ಸಹಿ)